ಕರ್ನಾಟಕ ಸರ್ಕಾರ

ಸಂಖ್ಯೆ: ಆಇ 23 ಟಿಎಆರ್ 2017

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ
ಬೆಂಗಳೂರು, ದಿನಾಂಕ:19.05.2017

## ಸುತ್ತೋಲೆ

ವಿಷಯ:-ಸೂಕ್ತ ಉದ್ದೇಶಿತ ಲೆಕ್ಕ ಶೀರ್ಷಿಕೆಗಳಡಿ ಅನುದಾನ ಬಿಡುಗಡೆ ಬಗ್ಗೆ.

******

ಖಜಾನೆ-2ರಲ್ಲಿ ಇಲಾಖೆಯ ಡಿಡಿಓಗಳು ಬಿಲ್ಲುಗಳನ್ನು ಸೃಜಿಸಲು ಅನುಕೂಲವಾಗುವಂತೆ ಕೆಲವೊಂದು ಮಾಸ್ಟರ್‌ಗಳನ್ನು ರಚಿಸಿ ನಿರ್ವಹಿಸಲಾಗಿದ್ದು, ವೆಚ್ಚದ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು Bill-Claim Type-Object Code ಆಧಾರದಲ್ಲಿ ಮ್ಯಾಪಿಂಗ್ ಮಾಡಲಾಗಿದೆ. ಆದರೆ ಕೆಲವೊಂದು ಇಲಾಖೆಗಳು ಖಜಾನೆ-2 ರಲ್ಲಿ ಬಿಲ್ಲುಗಳನ್ನು ಸಂಬಂಧಪಟ್ಟ ಉದ್ದೇಶಿತ ಲೆಕ್ಕ ಶೀರ್ಷಿಕೆ ಬದಲಿಗೆ ಬೇರೆ ಉದ್ದೇಶಿತ ಲೆಕ್ಕ ಶೀರ್ಷಿಕೆಗಳಡಿ ಸಲ್ಲಿಸಿ ಹಣ ಸೆಳೆದಿರುವುದನ್ನು ಗಮನಿಸಲಾಗಿದೆ.

ಅದರಲ್ಲೂ, ಸಾಮಾನ್ಯವಾಗಿ ದೂರವಾಣಿ ವೆಚ್ಚಗಳಿಗೆ-'052' ಬಾಡಿಗೆ ವಿದ್ಯುಚ್ಛಕ್ತಿ ಮುಂತಾದವುಗಳಿಗೆ-'071ಕಟ್ಟಡ ವೆಚ್ಚಗಳು' ಹಾಗೂ ವಾಹನ ಬಾಡಿಗೆಗೆ '195-ಸಾರಿಗೆ ವೆಚ್ಚಗಳು' ಇವುಗಳ ಬದಲಾಗಿ 051-ಸಾಮಾನ್ಯ ವೆಚ್ಚಗಳು, 059-ಇತರೆ ವೆಚ್ಚಗಳು, 015-ಪೂರಕ ವೆಚ್ಚಗಳು, ಮತ್ತಿತರ ಉದ್ದೇಶಿತ ಲೆಕ್ಕ ಶೀರ್ಷಿಕೆಗಳಡಿ ಇಲಾಖೆಗಳು ಹಣ ಬಿಡುಗಡೆಗೊಳಿಸಿರುತ್ತದೆ. 2016-17ನೇ ಸಾಲಿನಲ್ಲಿ ಏಕಕಾಲಿಕ ಕ್ರಮವಾಗಿ ಸಿಸ್ಟಂನಲ್ಲಿ ಈ ರೀತಿ ಹಣ ಸೆಳೆಯಲು ಅವಕಾಶ ಮಾಡಿಕೊಡಲಾಗಿದ್ದು, ಇದರಿಂದಾಗಿ ಮಾಸ್ಟರ್ ರಚನೆಯ ಮೂಲ ಉದ್ದೇಶ ಈಡೇರದೇ ಮೌಲ್ಯಾಂಶಗಳಲ್ಲಿ (Validations) ವ್ಯತ್ಯಾಸವಾಗಿರುತ್ತದೆ.

ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ವೆಚ್ಚಗಳನ್ನು ಕ್ರೋಢೀಕರಿಸಿ ವರ್ಗೀಕರಿಸಿರುವ ಪರಿಣಾಮವಾಗಿ ಇಲಾಖೆಯ ಯಾವ ನಿರ್ದಿಷ್ಟ ಬಾಬ್ತುಗಳಿಗೆ ವೆಚ್ಚವಾಗಿದೆ ಎಂಬುದು ಸ್ಪಷ್ಟವಾಗಿ ತಿಳಿಯುತ್ತಿಲ್ಲವೆಂದು ತನ್ನ ವರದಿಯಲ್ಲಿ ಉಲ್ಲೇಖಿಸಿದೆ. ಆದ್ದರಿಂದ ವೆಚ್ಚಗಳಲ್ಲಿ ಪಾರದರ್ಶಕತೆಯನ್ನು ತರುವ ಸಲುವಾಗಿ ಆರ್ಥಿಕ ಇಲಾಖೆಯಿಂದ ಪ್ರತಿ ವರ್ಷ ಆಯವ್ಯಯ ಅಂದಾಜುಗಳ ತಯಾರಿಕೆ ಬಗ್ಗೆ ಸಾಮಾನ್ಯ ಸೂಚನೆಗಳನ್ನು ಹೊರಡಿಸುವಾಗಿ ವ್ಯಾಪಕವಾದ ಉದ್ದೇಶಿತ ಲೆಕ್ಕ ಶೀರ್ಷಿಕೆಗಳ ಪಟ್ಟಿಯನ್ನು ಒಳಗೊಂಡ ಸುತ್ತೋಲೆ ಹೊರಡಿಸಲಾಗುತ್ತಿದೆ.

ಆದ್ದರಿಂದ, ಎಲ್ಲಾ ಇಲಾಖೆಗಳು 2018-19ನೇ ಸಾಲಿಗೆ ವೆಚ್ಚದ ಅಂದಾಜುಗಳನ್ನು ಆರ್ಥಿಕ ಇಲಾಖೆಗೆ ಸಲ್ಲಿಸುವಾಗ ವೆಚ್ಚಗಳ ಸ್ವಭಾವವನ್ನು ಯುಕ್ತವಾಗಿ ಪರಿಶೀಲಿಸಿ ಸೂಕ್ತ ಉದ್ದೇಶಿತ ಲೆಕ್ಕ ಶೀರ್ಷಿಕೆಯಡಿ ವೆಚ್ಚವನ್ನು ವರ್ಗೀಕರಿಸಲು ಹಾಗೂ ಹಣ ಬಿಡುಗಡೆ ಮಾಡುವಾಗ ವೆಚ್ಚಗಳಿಗನುಗುಣವಾಗಿ ಸೂಕ್ತ ಉದ್ದೇಶಿತ ಲೆಕ್ಕ ಶೀರ್ಷಿಕೆಯಡಿ ಬಿಡುಗಡೆ ಮಾಡಲು ಸೂಚಿಸಲಾಗಿದೆ.

(ಅರವಿಂದ್ ಶ್ರೀವಾಸ್ತವ)
ಸರ್ಕಾರದ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಆ ಮತ್ತು ಸಂ)

ಇವರಿಗೆ:

1. ಪ್ರಧಾನ ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳು.
3. ಸರ್ಕಾರದ ಕಾರ್ಯದರ್ಶಿಗಳು, (ಖಜಾನೆ-2) ಮತ್ತು ಪದನಿಮಿತ್ತ ಖಜಾನೆ ಆಯುಕ್ತರು, ಆರ್ಥಿಕ ಇಲಾಖೆ ವಾಣಿಜ್ಯ ತೆರಿಗೆ ಕಟ್ಟಡ, ಗಾಂಧಿ ನಗರ ಬೆಂಗಳೂರು-9.
4. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
5. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
6. ಎಲ್ಲಾ ಜಿಲ್ಲಾಧಿಕಾರಿಗಳು.
7. ಆರ್ಥಿಕ ಇಲಾಖೆಯ, ಎಲ್ಲಾ ಉಪ ಕಾರ್ಯದರ್ಶಿಗಳು/ಅಧೀನ ಕಾರ್ಯದರ್ಶಿಗಳು/ ಶಾಖಾಧಿಕಾರಿಗಳು.
8. ಹೆಚ್ಚುವರಿ ಪತ್ರಿಗಳು.